<u>**ಕರ್ನಾಟಕ ಸರ್ಕಾರ**</u>

ಸಂ:ಆಇ 01 ಟಿಟಿಸಿ 2020 ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:28.05.2020.

<u>**ಸುತ್ತೋಲೆ**</u>

**ವಿಷಯ**:-ಸಾರ್ವಜನಿಕ ಬ್ಯಾಂಕುಗಳ ಮೂಲಕ ಪಿಂಚಣಿ ಪಾವತಿಸುವ ಕುರಿತು.

**ಉಲ್ಲೇಖ**:-1. ಸರ್ಕಾರದ ಆದೇಶ ಸಂ:ಆಇ 01 ಟಿಟಿಸಿ 2019, ದಿ:24.07.2019.
2. ಸರ್ಕಾರದ ಸುತ್ತೋಲೆ ಸಂ:ಆಇ 01 ಟಿಟಿಸಿ 2020, ದಿ;30.03.2020.

****-****

ಉಲ್ಲೇಖ-2 ರ ಸರ್ಕಾರದ ಸುತ್ತೋಲೆಯಲ್ಲಿ ಪ್ರಸ್ತುತ ದೇಶದಲ್ಲಿ ಲಾಕ್‌ಡೌನ್ ಇರುವುದರಿಂದ ಹಾಗೂ ಪಿಂಚಣಿದಾರರಿಗೆ ತೊಂದರೆಯನ್ನು ತಪ್ಪಿಸಲು ಇನ್ನೂ 13 ಸಾರ್ವಜನಿಕ ಕ್ಷೇತ್ರ ಬ್ಯಾಂಕುಗಳಿಂದ ವಾಪಸ್ಸು ಪಡೆಯದೇ ಇರುವ ಪಿಂಚಣಿ ಆದೇಶಗಳ ಸಂಬಂಧ ಸದರಿ ಸಾರ್ವಜನಿಕ ಕ್ಷೇತ್ರ ಬ್ಯಾಂಕುಗಳೇ ಮಾರ್ಚ್ ಹಾಗೂ ಏಪ್ರಿಲ್ 2020 ರ ಮಾಹೆಯ ಪಿಂಚಣಿಯನ್ನು ಈಗಿರುವ ವ್ಯವಸ್ಥೆಯಲ್ಲಿ ಪಾವತಿಸಲು ಸೂಚಿಸಲಾಗಿರುತ್ತದೆ. ಏಪ್ರಿಲ್ 2020 ರ ಮಾಹೆಗಳ ಪಿಂಚಣಿಗಳನ್ನು ಪಾವತಿಸಿದ ನಂತರ ಸದರಿ ಪಿಂಚಣಿ ಆದೇಶಗಳನ್ನು ವಾಪಸ್ಸು ಪಡೆದು ಹೊಸದಾಗಿ ಪಿಂಚಣಿದಾರರಿಂದ 5 ಬ್ಯಾಂಕುಗಳ ಯಾವುದೇ ಶಾಖೆಗಳಲ್ಲಿ ಪಿಂಚಣಿ ಪಡೆಯಲು ಅಭಿಮತ ಪಡೆದು ಖಜಾನೆಗಳಿಂದ ಆಯಾ ಬ್ಯಾಂಕುಗಳಿಗೆ ಪಿಂಚಣಿ ಆದೇಶಗಳನ್ನು ರವಾನಿಸುವಂತೆ ತಿಳಿಸಲಾಗಿದೆ.

ಕೋವಿಡ್-2019 ಸಾಂಕ್ರಾಮಿಕ ರೋಗವು ಹರಡುತ್ತಿರುವ ಕಾರಣ ಸರ್ಕಾರವು ಹಿರಿಯ ನಾಗರಿಕರುಗಳನ್ನು ಹೊರಗಡೆ ಬಾರದಂತೆ ಮನೆಯಲ್ಲಿ ಇರುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಹಲವು ಪಿಂಚಣಿದಾರರು ದಿನಾಂಕ:24.07.2019 ರ ಆದೇಶದಲ್ಲಿ ಉಲ್ಲೇಖಿಸಲಾಗಿರುವ 5 ಬ್ಯಾಂಕುಗಳ ಮೂಲಕ ತಮ್ಮ ಪಿಂಚಣಿಯನ್ನು ಅಭಿಮತವನ್ನು ನೀಡದೇ ಇರುವುದನ್ನು ಗಮನಿಸಲಾಗಿದೆ. ಪಿಂಚಣಿದಾರರಿಂದ ಅಭಿಮತವನ್ನು ಪಡೆದು ಪಿಂಚಣಿ ಆದೇಶಗಳನ್ನು ವಾಪಸ್ಸು ಪಡೆದು ಉಲ್ಲೇಖಿಸಲಾಗಿರುವ 5 ಬ್ಯಾಂಕುಗಳಿಗೆ ಖಜಾನೆ ಇಲಾಖೆಯು ಪಿಂಚಣಿ ಆದೇಶಗಳನ್ನು ರವಾನಿಸಬೇಕಾಗಿದ್ದು, ಈ ಪ್ರಕ್ರಿಯೆಯು ಅಪೂರ್ಣವಾಗಿರುವುದು ಕೂಡ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ, ಇನ್ನೂ 13 ಸಾರ್ವಜನಿಕ ಕ್ಷೇತ್ರ ಬ್ಯಾಂಕುಗಳಿಂದ ವಾಪಸ್ಸು ಪಡೆಯದೇ ಇರುವ ಪಿಂಚಣಿ ಆದೇಶಗಳ ಸಂಬಂಧ ಪಿಂಚಣಿಯನ್ನು ಸದರಿ ಸಾರ್ವಜನಿಕ ಕ್ಷೇತ್ರ ಬ್ಯಾಂಕುಗಳೇ ಇನ್ನೂ 3 ತಿಂಗಳುಗಳ ಕಾಲ ಅಂದರೆ ಮೇ ನಿಂದ ಜುಲೈ 2020 ರವಗಿನ ಮಾಹೆಯ ಪಿಂಚಣಿಯನ್ನು ಈಗಿರುವ ವ್ಯವಸ್ಥೆಯಲ್ಲಿ

ಪಾವತಿಸಲು ಸೂಚಿಸಲಾಗಿದೆ. ಜುಲೈ 2020 ರ ಮಾಹೆಗಳ ಪಿಂಚಣಿಗಳನ್ನು ಪಾವತಿಸಿದ ನಂತರ ಸದರಿ ಪಿಂಚಣಿ ಆದೇಶಗಳನ್ನು ವಾಪಸ್ಸು ಪಡೆದು ಹೊಸದಾಗಿ ಪಿಂಚಣಿದಾರರಿಂದ 5 ಬ್ಯಾಂಕುಗಳ ಯಾವುದೇ ಶಾಖೆಗಳಲ್ಲಿ ಪಿಂಚಣಿ ಪಡೆಯಲು ಅಭಿಮತ ಪಡೆದು ಖಜಾನೆಗಳಿಂದ ಆಯಾ ಬ್ಯಾಂಕುಗಳಿಗೆ ಪಿಂಚಣಿ ಆದೇಶಗಳನ್ನು ರವಾನಿಸುವುದು.

ಈಗಾಗಲೇ ಪಿಂಚಣಿ ಆದೇಶಗಳನ್ನು ಖಜಾನೆಗಳಲ್ಲಿ ವಾಪಸ್ಸು ಪಡೆದು ಮೇಲ್ಕಂಡ 5 ಬ್ಯಾಂಕುಗಳಿಗೆ ರವಾನಿಸಿರುವ ಪಿಂಚಣಿಗಳನ್ನು ಮೇಲ್ಕಂಡ 5 ಬ್ಯಾಂಕುಗಳು ನಿರ್ವಹಿಸುವುದು.

ಈ ಸುತ್ತೋಲೆಯ ಸೂಚನೆಗಳನ್ನು ಸಂಬಂಧಿಸಿದ ಬ್ಯಾಂಕುಗಳ ಗಮನಕ್ಕೆ ತಂದು ಪಿಂಚಣಿದಾರರಿಗೆ ಪಿಂಚಣಿಯನ್ನು ಪಡೆಯಲು ಯಾವುದೇ ತೊಂದರೆಯಾಗದ ರೀತಿಯಲ್ಲಿ ಕ್ರಮಕೈಗೊಳ್ಳುವಂತೆ ಜಿಲ್ಲಾ ಖಜಾನೆಗಳಿಗೆ ಸೂಚಿಸಲು ಖಜಾನೆ ಆಯುಕ್ತರಿಗೆ ತಿಳಿಸಿದೆ. ಅಲ್ಲದೇ ಈ ಕಾಲಮಿತಿಯನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲವೆಂದು ತಿಳಿಸಿದೆ.

28/5/2020

(ಹೆಚ್.ಎ. ಶೋಭ)

ಸರ್ಕಾರದ ಉಪ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

ಪ್ರತಿಗಳು:-

1. ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಉಪ ಮಹಾಲೇಖಪಾಲರು (ಪಿಂಚಣಿ), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
5. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ವಿಧಾನಸೌಧ, ಬೆಂಗಳೂರು.
6. ಆಯುಕ್ತರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
7. ಜನರಲ್ ಮ್ಯಾನೇಜರ್, ಭಾರತೀಯ ರಿಸರ್ವ್ ಬ್ಯಾಂಕ್, ನೃಪತುಂಗ ರಸ್ತೆ, ಬೆಂಗಳೂರು.
8. ಎಲ್ಲಾ ಪಿಂಚಣಿ ಪಾವತಿ ಬ್ಯಾಂಕುಗಳಿಗೆ-ಖಜಾನೆ ಆಯುಕ್ತರ ಮುಖಾಂತರ.
9. ಎಲ್ಲಾ ಜಿಲ್ಲಾ ಖಜಾನೆಗಳಾಧಿಕಾರಿಗಳು - ಖಜಾನೆ ಆಯುಕ್ತರ ಮುಖಾಂತರ.
10. ಅಪರ ನಿರ್ದೇಶಕರು, ಟಿಎನ್‌ಎಂಸಿ ಖನಿಜ ಭವನ, ಬೆಂಗಳೂರು.
11. ಜಂಟಿ ನಿರ್ದೇಶಕರು, ಪಿಂಚಣಿ ಬಟವಾಡೆ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.